# ಕರ್ನಾಟಕ ಸರ್ಕಾರದ ನಡವಳಿಗಳು

ಸಂ. 1122
ದಿನಾಂಕ 11/5/22

ವಿಷಯ : M/s Solarcraft Power India 7 Private Limited ಕಂಪನಿಯವರಿಗೆ ಕಲಬುರಗಿ ಜಿಲ್ಲೆಯ, ಆಳಂದ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 300.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/SCP17PL-300.3 MW/ Aland/Kalaburagi/F-44/2022/949, ದಿನಾಂಕ:16.04.2022.

2) ದಿನಾಂಕ:19.04.2022 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Solarcraft Power India 7 Private Limited ರವರಿಗೆ ಕಲಬುರಗಿ ಜಿಲ್ಲೆಯ, ಆಳಂದ ತಾಲ್ಲೂಕಿನ ಝುಲಕಿ ಕೆ, ಕವಲಗ, ಭೂಸನೂರ್, ದುರ್ಗಾ ಸಿರೂರ್ ಕಟರಾಬಾದ್, ಅಂಬೇವಾಡಿ, ರಾಜ್ವಾಡ, ಮೋಘ ಕೆ, ಸಂಗೊಲಗಿ, ಜಿಡಗ, ಕಿನ್ನಿಹಬ್ಬಾಸ್, ಆಳಂದ, ಕಮನ್ ಹಾಲಿ, ಸಕ್ಕರಗ, ಷಕಾಪುರ್, ಭೀಮ್ ಪುರ್, ನಗೇಲ್ ಗಾಂವ್, ಹಿರೋಲಿ, ಸವಲೇಶ್ವರ್, ಜೀರಹಳ್ಳಿ, ಸರಸಾಂಬ, ಪಡಸ್ವಾಲಿ, ಹೆಬ್ಲಿ, ಮಟ್ಕಿ, ತೀರ್ಥ್, ಚಿಂಚೋಳಿ ಬಿ, ಸಾಲೆಗಾಂವ್ ಮತ್ತು ನೀರ್ಗುಡಿ ಗ್ರಾಮಗಳಲ್ಲಿ 300.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಪಡೆಯುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಮಾರ್ಗಸೂಚಿಯಂತೆ, ಅಳವಡಿಸುವ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

Wind Section 4499 13/5/22

ಮುಂದುವರೆದು, M/s Solarcraft Power India 7 Private Limited ರವರ ಪ್ರಸ್ತಾವನೆಯನ್ನು ಪರಿಶೀಲಿಸಿಲಾಗಿ, ಸದರಿಯವರು ಹಂಚಿಕೆಗಾಗಿ ಕೋರಿರುವ ಸ್ಥಳವು ಈಗಾಗಲೇ M/s B&S Energy Private Limited ಕಂಪನಿಯವರಿಗೆ ದಿನಾಂಕ:02.02.2022 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ಕ್ರಮವಾಗಿ 10 ಮೆ.ವ್ಯಾ ಮತ್ತು 2 ಮೆ.ವ್ಯಾ ಸಾಮರ್ಥ್ಯದ ಪ್ರಸ್ತಾವನೆಗಳಿಗೆ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿದ್ದು, ದಿನಾಂಕ:05.04.2022 ರಂದು ಸರ್ಕಾರದಿಂದ ತಾತ್ವಿಕ ಅನುಮೋದನೆ ಪತ್ರವನ್ನು ನೀಡಿರುವ ಸ್ಥಳಗಳ ಮೇಲೆ ಬರುತ್ತದೆ. ಮೆ: B&S Energy Private Limited ರವರು 1 ಮೆ.ವ್ಯಾ ಸಾಮರ್ಥ್ಯದ 12 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿರುವ ಪ್ರದೇಶವು ಹೆಚ್ಚಿನ ವಿಸ್ತೀರ್ಣವನ್ನು ಹೊಂದಿರುತ್ತದೆ. ಪ್ರಸ್ತುತ ಸರ್ಕಾರದಿಂದ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ ಪರಿಗಣಿಸುತ್ತಿರುವ ಪ್ರಕಾರ ಸುಮಾರು 48 ಎಕರೆ ಜಮೀನು ಮಾತ್ರ ಬೇಕಾಗುತ್ತದೆ. ಆದುದರಿಂದ, M/s Solarcraft Power India 7 Private Limited, ರವರು M/s B&S Energy Private Limited ರವರಿಗೆ ಬೇಕಾಗಿರುವ 48 ಎಕರೆ ಜಮೀನನ್ನು ಹೊರತು ಪಡಿಸಿ, ಉಳಿದ ಜಮೀನಿನಲ್ಲಿ 300.3 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿಪಡಿಸಬಹುದಾಗಿದೆ ಎಂದು ಕ್ರೆಡಲ್ ರವರು ಅಭಿಪ್ರಾಯಿಸಿರುತ್ತಾರೆ.

MD KREDL

M/s Solarcraft Power India 7 Private Limited ಕಂಪನಿಯು ದಿನಾಂಕ:11.09.2021ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ನವದೆಹಲಿಯಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s Solarcraft Power Private Limited, Mauritius ಕಂಪನಿಯ SPV ಆಗಿದ್ದು, ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.12.2021ರ ಅಂತ್ಯಕ್ಕೆ ರೂ.484.28 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

GM (Tech) KREDL

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯಲ್ಲಿ M/s Solarcraft Power India 7 Private Limited ರವರು ಕಲಬುರಗಿ ಜಿಲ್ಲೆಯ, ಆಳಂದ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ISTS

...2